ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಓಲ.

ತಾಲ್ಲೂಕು	೮೭–೮೮	೮೮–೮೯	೮೯–೯೦	ಒಟ್ಟು
ಬೆಳ್ತಂಗಡಿ	೨	೩	೩	೮
ಭಂಟ್ವಾಳ	೨	೫	೧	೮
ಕುಂದಾಪುರ	೨	೫	೪	೧೧
ಕಾರ್ಕಳ	೧	೪	೪	೯
ಮಂಗಳೂರು	೨	೪	೨	೮
ಪುತ್ತೂರು	೧	೩	೧	೫
ಸೂಳ್ಯ	೧	೧	–	೨
ಉಡುಪಿ	೧	೮	೮	೧೭
ಒಟ್ಟು	೧೨	೩೩	೨೩	೭೮

ಆ) ಇಲ್ಲ, ಸದ್ಯಕ್ಕೆ ಔಷಧ ಸರಬರಾಜನ್ನು ಮಾತ್ರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್ಚಿಸಿದ್ದು ಮಿಕ್ಕ ಸೌಲಭ್ಯಗಳನ್ನು ಹಣದ ಲಭ್ಯತೆಯನ್ನು ಅನುಸರಿಸಿ ಒದಗಿಸಲಾಗುವುದು.

ಇಡಗೂರ್ ಗ್ರಾಮದಲ್ಲಿ ಹಾಲಿನ ಕೇಂದ್ರ

೮೭೬(೧೦೫೨) ಶ್ರೀ ಜಿ ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅರಣ್ಯ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಇಡಗೂರ್ ಗ್ರಾಮವು ಸುತ್ತಮುತ್ತಲ ೨೦ ಹಳ್ಳಿಗಳಿಗೆ ಕೇಂದ್ರವಾಗಿದ್ದು ಅಲ್ಲಿ ಒಂದು ಹಾಲಿನ ಕೇಂದ್ರ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರೀ ಗ್ರಾಮದಲ್ಲಿ ಹಾಲಿನ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದೇ?

ಇ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಬಸವಲಿಂಗಪ್ಪ (ಪಶು ಸಂಗೋಪನೆ ಮತ್ತು ಅರಣ್ಯ ಸಚಿವರು).—

ಅ) ಬಂದಿದೆ.

ಆ) ಸಧ್ಯದಲ್ಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನ ಹರಿಜನ, ಗಿರಿಜನರ ಭೂಮಿಯನ್ನು ಅರಣ್ಯ ಇಲಾಖೆಯವರಂ ಆಕ್ರಮಿಸಿರುವ ಬಗ್ಗೆ

೮೭೮ (೧೫೦೭) ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕುಂದಾಪುರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರಿಂದ ಹರಿಜನ, ಗಿರಿಜನರಿಗೆ ಮಂಜೂರಾಗಿ ಹಕ್ಕು ಪತ್ರ ಹೊಂದಿದ್ದ ಭೂಮಿಯನ್ನು ಬಲಾತ್ಕಾರವಾಗಿ ಆಕ್ರಮಿಸಿರುವ ಬಗ್ಗೆ ದೂರುಗಳಿದ್ದು, ಈ ರೀತಿಯ ಪ್ರಕರಣಗಳ ಸಂಖ್ಯೆ ಎಷ್ಟು? ವಿಸ್ತೀರ್ಣ ಸಹಿತ ವಿವರ?